ಅವಶ್ಯಕತೆ ಇದಯಂದು ಕ್ಯಾಬಿನೆಟ್ ಅಪ್ರೂವ್ ಮಾಡಿದೆ. ಈಗ ಅದನ್ನು ರಿವೈಸ್ ಮಾಡಬೇಕಾದರೆ It has to go to Cabinet again. ಅಥವಾ ಕ್ಯಾಬಿನೆಟಿನವರು 1000 ಹಾಸಿಗೆಗಳ ಆಸ್ಪತ್ರೆ ಬದಲು 500 ಹಾಸಿಗೆಗಳ ಆಸ್ಪತ್ರೆ ಮಾತ್ರ ಸಾಕು ಎಂದು ಡಿಸೈಡ್ ಆಗಿದ್ದರೆ ಅದನ್ನು ಇಲ್ಲಿ ಹೇಳಲಿ. ಆದರೆ ಇಲ್ಲಿ ಪ್ರಶ್ನೆ ಏನೆಂದರೆ 1000 ಹಾಸಿಗೆಗಳ ಆಸ್ಪತ್ರೆ ಹಾಸನದಲ್ಲಿ ಆಗತ್ಯ ಇದಯೆಂದು ನಿರ್ಣಯ ತಗದುಕೊಂಡಿದ್ದಾರೆ. Administrative and technical approval ಆಗಿದೆ. ಕೆಲಸ ಪ್ರಾರಂಭವಾಗಿದೆ. ಇದಲ್ಲಿ ಇರುವಾಗ, ಈಗ 500 ಹಾಸಿಗೆಯುಳ್ಳದ್ದರ ಬಗ್ಗೆ ಹೇಳುತ್ತಿದ್ದಾರೆ ಅದಕ್ಕೆ ದಯವಿಟ್ಟು ತಾವು ಇದರ ಬಗ್ಗೆ ವಿಚಾರ ಮಾಡಬೇಕು. ಬಹಳ ಸುಲಭವಾಗಿ ಇದಕ್ಕೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ತಾವು ನಿಜವಾಗಿ ಅದನ್ನು 500 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮಾಡಬೇಕೆಂದಾದರೆ ಮಾಡಿ, ಕ್ಯಾಬಿನೆಟಿನಲ್ಲಿ ಇದನ್ನು ತರಿಸಿ ರಿವೈಸ್ ಮಾಡಿಕೊಂಡು ಈ ಹಾಸನದಲ್ಲಿ 1000 ಹಾಸಿಗೆಗಳ ಆಸ್ಪತ್ರೆಯ ಆಗತ್ಯತೆ ಇಲ್ಲ. 500 ಹಾಸಿಗೆಗಳ ಆಸ್ಪತ್ರೆ ಮಾತ್ರ ಆಗತ್ಯ ಎಂದು ಹೇಳಿ ಮಾಡಬೇಕಾಗುತ್ತದೆ. ಇಲ್ಲಿ ಏನು ಉತ್ತರ ಕೊಡಬೇಕೆಂದರೆ, ಇಲ್ಲಿ ಉತ್ತರ ಕೊಡುವಾಗ ಸರಕಾರ ಏನು ನಿರ್ಣಯ ತಗದುಕೊಂಡಿದೆ ಅದನ್ನು ಹೇಳಬೇಕೇ ಹೊರತು ನಿರ್ಣಯ ತಗದುಕೊಂಡಿರದೇ ಬರೀ ಉಹಾಪೋಹಗಳ ಮೇಲೆ ಹೇಳಬಾರದು. ಒಂದು ವೇಳೆ ಇದನ್ನು ತಾವು We will take up again in the Cabinet ಎಂದಾದರೂ ಹೇಳಿ. ಇಲ್ಲಿ 1000 ಹಾಸಿಗೆಗಳ ಆಸ್ಪತ್ರೆಯ ಆಗತ್ಯ ಇಲ್ಲ 500 ಹಾಸಿಗೆಗಳ ಆಸ್ಪತ್ರೆಯ ಆಗತ್ಯ ಮಾತ್ರ ಇದೆ ಎಂದು ಹೇಳಿ ಮಾಡಿ. ಈ ರೀತಿ ಹೇಳುವಾಗ ಕ್ಯಾಬಿನೆಟ್ ಡಿಸಿಷನ್ ಏನು ತಗದುಕೊಳ್ಳುತ್ತದೆ ಆ ಡಿಸಿಷನ್ ನನ್ನು ಈ ಸದನಕ್ಕೆ ಕಮ್ಯುನಿಕೇಟ್ ಮಾಡಬೇಕೇ ಹೊರತು ತಮ್ಮದೇ ಆದಂಥ ನಿರ್ಣಯವನ್ನು ಒಂದು ಇಲಾಖೆಯು ತನ್ನ ಇಚ್ಛಾನುಸಾರ ತಗದುಕೊಂಡ ನಿರ್ಣಯವನ್ನು ಇಲ್ಲಿ ಹೇಳಿದರೆ ಅದು ಸಮಪರ್ಕವಾದಂಥ ಉತ್ತರ ಆಗುವುದಿಲ್ಲ. ಇದು ಒಂದಕ್ಕೆ ಅಲ್ಲ ಎಲ್ಲದಕ್ಕೂ ಈ ಅಂಸ ಅನ್ವಯವಾಗುತ್ತೆ.

SRI. M.C. NANAIAH : Mr. Speaker Sir, let me make it very clear, as at the moment there is no proposal to reduce the bed strength from 1000 to 500. Second thing is, the Government is committed to complete the first phase of the project within a period of one year. The second phase of the project will be taken up later.

ತದೆಹಿಡಿಯಲಾದ ಪ್ರಶ್ನೆಗಳು

ಕೆ.ಜಿ.ಎಫ್.ನ ಅಂಬೇಡ್ಕರ್ ಬಿ.ಎಡ್. ಕಾಲೇಜು

82 - ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಸ್ತುತದಲ್ಲಿ ನಡೆಸಲಾಗುತ್ತಿರುವ ಕೆಜಿಎಫ್‌ನ ಅಂಬೇಡ್ಕರ್ ಬಿ.ಇಡ್ ಕಾಲೇಜು ಅನ್ನು

ಮತ್ತೊಂದು ಕ್ಷೇತ್ರಕ್ಕೆ ವರ್ಗಾಯಿಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಆ ರೀತಿಯಲ್ಲಿ ವರ್ಗಾವಣೆ ಮಾಡಲು ಸರ್ಕಾರದ ನಿಯಮಾವಳಿಗಳೇನಿವೆ;

ಇ) ನಿಯಮಾವಳಿಗಳೆಷ್ಟು, ಸದರಿ ಕಾಲೇಜು ಅನ್ನು ವರ್ಗಾವಣೆ ಮಾಡಿದ್ದಲ್ಲಿ ಹೊಸದಾಗಿ ಆ ಕ್ಷೇತ್ರಕ್ಕೆ ಮತ್ತೊಂದು ಬಿ.ಇಡಿ ಕಾಲೇಜು ಅನ್ನು ಸರ್ಕಾರಕ್ಕೆ ಮಂಜೂರು ಮಾಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದೇ;

ಈ) ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗಿದ್ದಲ್ಲಿ ಕಾರಣಗಳು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಕೆ.ಜಿ.ಎಫ್.ನಲ್ಲಿ ಅಂಬೇಡ್ಕರ್ ಬಿ ಇಡಿ ಕಾಲೇಜು ಇರಲಿಲ್ಲ. ಗೋಲ್ಡ್‌ಫೀಲ್ಡ್ ಶಿಕ್ಷಣ ಕಾಲೇಜು 1973ರಿಂದ ಅಸ್ತಿತ್ವದಲ್ಲಿತ್ತು. 8 ಕಿ.ಮೀ. ಅಂತರವಿರುವ ಬಂಗಾರುಪೇಟೆಗೆ ಕಾಲೇಜು ಸ್ಥಳಾಂತರಗೊಂಡು ಅದಕ್ಕೆ ಅನುಮತಿಯನ್ನು ಕೋರಿತ್ತು. ಬೆಂಗಳೂರು ವಿಶ್ವವಿದ್ಯಾಲಯದ ಸ್ಥಳೀಯ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಬೆಳಕಿನಲ್ಲಿ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತಾರೀಖು 4-8-95ಕಂಬ್ಕಿ: ಇದಿ 95 ಯುಬಿಸಿ 94ರ ಸರ್ಕಾರಿ ಆದೇಶದಲ್ಲಿ 94-95ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಕಾಲೇಜನ್ನು ವರ್ಗಾಯಿಸಲು 1975ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 53ನೇ ಪ್ರಕರಣದಡಿ ಅನುಮೋದನೆ ನೀಡಲಾಗಿದೆ. ತಾರೀಖು 31-3-97ರವರೆಗೆ ಯಾವುದೇ ಹೊಸ ಶಿಕ್ಷಣ ಕಾಲೇಜುಗಳನ್ನು ಸ್ಥಾಪಿಸಬಾರದೆಂಬ ತಾತ್ವಿಕ ನಿರ್ಧಾರ ಜಾರಿಯಲ್ಲಿದೆ. ಆದ್ದರಿಂದ ಹೊಸ ಶಿಕ್ಷಣ ಕಾಲೇಜುಗಳನ್ನು ಸ್ಥಾಪಿಸಲು ಸಾಧ್ಯವಿಲ್ಲ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಏನು ಹೇಳಿದ್ದಾರೋ ಗೊತ್ತಿಲ್ಲ. ನನಗೆ ಕೊಟ್ಟಿರುವ ಉತ್ತರದಲ್ಲಿ ತಪ್ಪಾಗಿದೆ. There may be technical mistakes also. Ambedkar B.Ed College was not in existence in K.G.F. Gold Field College or Education was in existence sine 1973 ಅಲ್ಲಿರುವುದು ಶುಭಾಷಿನಿ ಬಿ.ಎಡ್. ಕಾಲೇಜ್ ಮಾತ್ರ. ಈ ಶುಭಾಷಿನಿ ಬಿ.ಎಡ್. ಕಾಲೇಜು 20 ವರ್ಷಗಳಾದ ಕೆ.ಜಿ.ಎಫ್.ನಲ್ಲಿ ಇದ್ದದ್ದನ್ನು ಬಂಗಾರಪೇಟೆಗೆ ಶಿಫ್ಟ ಮಾಡಿದ್ದಾರೆಯೇ? ಶಿಫ್ಟ ಮಾಡಿದ್ದರೆ ಯಾವ ಕಾರಣಕ್ಕಾಗಿ ಶಿಫ್ಟಮಾಡಿದ್ದಾರೆ ಎಂಬುದಕ್ಕೆ ಉತ್ತರ ಕೊಡಬೇಕು?

ಶ್ರೀ ಡಿ. ಮಂಜುನಾಥ್ : ಸನ್ಮಾನ್ಯ ಅಧ್ಯಕ್ಷರೆ, ಕೆ.ಜಿ.ಎಫ್. ನಲ್ಲಿ ಬಿ.ಎಡ್. ಶಿಕ್ಷಣ ಕಾಲೇಜನ್ನು ನಡೆಸುತ್ತಿರುವ ಸಂಸ್ಥೆಯ ಹೆಸರು ಶುಭಾಷಿನಿ ಶಿಕ್ಷಣ ಟ್ರಸ್ಟ ಎಂದು. ಈ ಶುಭಾಷಿನಿ ಶಿಕ್ಷಣ ಟ್ರಸ್ಟನವರೇ ಕೆ.ಜಿ.ಎಫ್.ನಲ್ಲಿ ನಡೆಸುತ್ತಿದ್ದ ಕಾಲೇಜಿಗೆ ಅಂಬೇಡ್ಕರ್ ಬಿ.ಎಡ್. ಕಾಲೇಜು ಎಂದು ಹೆಸರು ಇಟ್ಟುಕೊಂಡಿದ್ದರು. ಗೋಲ್ಡ್‌ಫೀಲ್ಡ್ ಶಿಕ್ಷಣ ಕಾಲೇಜು 1973 ರಿಂದ ಪ್ರಾರಂಭವಾಯಿತು. 1992 ರಲ್ಲಿ ಈ ಸಂಸ್ಥೆಯವರು ಏನು ಮಾಡಿದರೆಂದರೆ ಈ ಕಾಲೇಜನ್ನು ಬೇರೆ ಕಡೆಗೆ ಶಿಫ್ಟ ಮಾಡಬೇಕು ಎಂದು ಯಲಹಂಕ, ನೆಲಮಂಗಲ ಅಥವಾ ಕೆಂಗೇರಿ ಈ ಕಡೆಗೆ ಯಾವುದಾದರೂ ಸ್ಥಳಕ್ಕೆ ಸ್ಥಳಾಂತರಿಸಲು ಅನುಮತಿ ಕೋರಿತ್ತು. ಇದಕ್ಕೆ ಕಾರಣವೇನೆಂದರೆ 1992 ರಲ್ಲಿ ಕೆ.ಜಿ.ಎಫ್.ನಲ್ಲಿ ಸ್ವಲ್ಪ ಗಲಾಟೆಯಾಯಿತು.

ಆ ಗಲಾಟೆಯ ಸಂದರ್ಭದಲ್ಲಿ ಈ ಸಂಸ್ಥೆಯವರು ಹಿಂಸೆ ತಾಳಲಾರದೆ, ನಮಗೆ ತೊಂದರೆ ಕೊಡುತ್ತಾರೆ ಈ ಕಾಲೇಜನ್ನು ಬೇರೆ ಕಡೆಗೆ ಶಿಫ್ಟ್ ಮಾಡಿ ಎಂದು ಹೇಳಿದರು. ಆದರೂ ಸಹ ಸರ್ಕಾರ ಆ ಸಂಸ್ಥೆಯ ಬೇಡಿಕೆಯನ್ನು ತಿರಸ್ಕಾರ ಮಾಡಿತು. 1994 ರಲ್ಲಿ ಆ ಸಂಸ್ಥೆಯವರು ಅನಧಿಕೃತವಾಗಿ 8 ಕಿ.ಮೀ. ದೂರದ ಬಂಗಾರಪೇಟೆಗೆ ಶಿಫ್ಟ್ ಮಾಡಿದರು. ಅವರು ಶಿಫ್ಟ್ ಮಾಡಿದ ಮೇಲೆ ನಮಗೆ ದೂರು ಬಂತು. ಅದಕ್ಕೆ ಅವರು ನಮಗೆ ಈ ರೀತಿ ತೊಂದರೆಯಿದೆ ಅದಕ್ಕೋಸ್ಕರ ಶಿಫ್ಟ್ ಮಾಡಿದೆವು ಎಂದು ಕೇಳಿಕೊಂಡರು. ವಿಶ್ವವಿದ್ಯಾನಿಲಯದ ಸ್ಥಳೀಯ ಪರಿಶೀಲನಾ ಸಮಿತಿಯ ಶಿಫಾರಸ್ಸಿನ ಮೇರೆಗೆ ಮಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅನುಮತಿ ನೀಡಲಾಯಿತು.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಇದು ಅನ್ಯಾಯ ಸಾರ್. ಅಲ್ಲಿ ಏನೋ ಗಲಾಟೆಯಾಗಿದೆ, ವಿಶ್ವವಿದ್ಯಾನಿಲಯದ ಸಮಿತಿಯಿಂದ ರಿಪೋರ್ಟ್ ಬಂದಿದೆ, ಅದಕ್ಕೆ ನಾವು ಶಿಫ್ಟ್ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದೇವೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. 1985ರಲ್ಲಿ ಕೆ.ಜಿ.ಎಫ್.ನಲ್ಲಿ linguistic ಗಲಾಟೆಯಾಗಿದೆ. ಲ್ಯಾಂಗ್ವೇಜ್ ಬಗ್ಗೆ ಗಲಾಟೆಯಾಗಿದೆ. ಅದಕ್ಕೆ ಕೆ.ಜಿ.ಎಫ್. ನ್ನು ಬೇರೆ ಕಡೆಗೆ ಶಿಫ್ಟ್ ಮಾಡಿಬಿಡುತ್ತೀರಾ? Is it not your duty to rectify that mistake? 1983 ರಲ್ಲಿ ಆಮಂಥ ಮೂರ್ಖ ಗಲಾಟೆಯಲ್ಲಿ Several people also died. Can you say that ಕೆ.ಜಿ.ಎಫ್.ನಲ್ಲಿ ಬಹಳ ಗಲಾಟೆಯಾಗಿದೆ, ಎಂದು ತಾವು ಕೆ.ಜಿ.ಎಫ್. ನಿಂದ ಶಿಫ್ಟ್ ಮಾಡಿಬಿಡುತ್ತೀರಾ? ಈ ರೀತಿ ಆದರೆ ಗಲಾಟೆಯಾಯಿತು ಎಂದು ಶಿಫ್ಟ್ ಮಾಡುವುದಕ್ಕೆ ಆಗುತ್ತದೆಯೇ? You know very well, it is the B.Ed College. As Dr. Baba Saheb Ambedkar said, I have to educate my people. ಈಗ ನನಗೆ ನೋವು ಆಗುತ್ತಿರುವುದೇನೆಂದರೆ ವಿದ್ಯಾಂತರನ್ನು ಅವಿದ್ಯಾಂತರನ್ನು ಮಾಡಬೇಕೇ? ಅಥವಾ ಅವಿದ್ಯಾಂತರನ್ನು ವಿದ್ಯಾಂತರನ್ನಾಗಿ ಮಾಡಬೇಕೆ? ತಾವಲ್ಲಿ ದೊಡ್ಡವರು, ತಮಗೆ ಗೊತ್ತಿದೆ, ಇದನ್ನು ಇನ್ವಫಕ್ಟಸ್ ಮಾಡುವುದಕ್ಕೆ ಮೂನಿಸಿಪಲ್ ಕಮಿಟಿಯವರು ಬಂದಿದ್ದಾರೆಯೇ? ಅವರು ಏನು ರಿಪೋರ್ಟ್ ಕೊಟ್ಟಿದ್ದಾರೆ? On what ground you have shifted that Institution? ಆ ಶಿಕ್ಷಣ ಸಂಸ್ಥೆಯವರು, ನಾವು ಯಲಹಂಕಕ್ಕೆ ಹೋಗಿಬಿಡುತ್ತೇವೆ ಅಥವಾ ಬೇರೆ ಕಡೆಗೆ ಹೋಗಿಬಿಡುತ್ತೇವೆ ಅಂತ ಹೇಳುವುದಾದರೆ He is not the authority to say that? The Government is superior, you cannot simply accept whatever they say. You have to tell them not to shift the College. You said it is eight Kilometres, I will agree

MR SPEAKER : I am glad. ಇವತ್ತು ಬಹಳ ಚೆನ್ನಾಗಿ ಮಾತನಾಡುತ್ತಿದ್ದೀರಿ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಆ 8 ಕಿ. ಮೀ. ಅಂತರದಲ್ಲಿ ಕೆ.ಜಿ.ಎಫ್. ಕಡೆಯ ಒಬ್ಬರು ಎಂ.ಎಲ್.ಎ. ಇದ್ದಾರೆ, ಬಂಗಾರಪೇಟೆಯಲ್ಲಿ ಒಬ್ಬರು ಎಂ.ಎಲ್.ಎ. ಇದ್ದಾರೆ. ಬರೀ 8 ಕಿ.ಮೀ. ಆದ್ದರಿಂದ ಕೆ.ಜಿ.ಎಫ್.ನಲ್ಲಿ ಎಂ.ಎಲ್.ಎ. ಬೇಡ, ಕೇವಲ ಬಂಗಾರಪೇಟೆಯಲ್ಲಿ ಮಾತ್ರ ಎಂ.ಎಲ್.ಎ ಇದ್ದರೆ ಸಾಕು ಎಂದು ಹೇಳುತ್ತಾರೋ? ಅದು ಹೇಗೆ ಆಗುತ್ತದೆ ಸ್ವಾಮಿ, ದಯವಿಟ್ಟು ನನಗೆ ಉತ್ತರ ಕೊಡಿ.

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಇದು ಖಾಸಗೀ ಶಿಕ್ಷಣ ಸಂಸ್ಥೆ. ಅವರಿಗೆ ಏನೋ ತೊಂದರೆಯಾಯಿತು, ಅಲ್ಲಿಯ ಉಪಾಧ್ಯಾಯರಿಗೆ ಕಿರುಕುಳ ಕೊಟ್ಟರು ಎಂದು ಹೇಳಿ ಆ ಶಿಕ್ಷಣ ಸಂಸ್ಥೆಯವರು ಸರ್ಕಾರಕ್ಕೆ ನಿವೇದನ ಮಾಡಿಕೊಂಡರು. ಅವರು ಹಾಗೆ ನಿವೇದನೆ ಸರ್ಕಾರಕ್ಕೆ ಮಾಡಿಕೊಂಡ ಮೇಲೆ ನೂರಲು ಸ್ಥಳಾಂತರ ಮಾಡುವುದಿಲ್ಲವೆಂದು ಸರ್ಕಾರ ತೀರ್ಮಾನ ಮಾಡಿತು. ಆದು ಆದಮೇಲೆ ವಿಶ್ವವಿದ್ಯಾನಿಲಯದಿಂದ ಒಂದು ಸಮಿತಿಯನ್ನು ಕಳುಹಿಸಿ ಅಲ್ಲಿ ಏನು ತೊಂದರೆಯಿದೆಯೆಂದು ವರದಿ ಮಾಡಿ ಸರ್ಕಾರಕ್ಕೆ ವರದಿ ಕಳುಹಿಸಿ ಎಂದು ಕೇಳಿಕೊಂಡೆವು. ಈಗಾಗಲೇ 1994ರಲ್ಲಿ ಅವರು ಶಿಫ್ಟ್ ಮಾಡಿಕೊಂಡುಬಿಟ್ಟಿದ್ದಾರೆ. ಕಳೆದ ವರ್ಷ ಆಗಸ್ಟ್ 4ನೇ ತಾರೀಖು ಈ ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೇವೆ. ಈಗ ರಾಜೇಂದ್ರನವರ ಪ್ರಶ್ನೆ ಏನೆಂದರೆ, ಆ ಕಾಲೇಜನ್ನು ಕಂಗೇರಿ, ನೆಲಮಂಗಲಕ್ಕೆ ಸ್ಥಳಾಂತರಿಸುವ ಬದಲು ಅಲ್ಲಿಯೇ ಹತ್ತಿರ 8 ಕಿ.ಮೀ. ದೂರಕ್ಕೆ ಶಿಫ್ಟ್ ಮಾಡಿದರೆ ಕೆ.ಜಿ.ಎಫ್. ನವರೂ ಸಹ ಕಾಲೇಜಿಗೆ ಸೇರಿಕೊಳ್ಳಬಹುದೆಂದು ನಾವು ಸಹ ಬಹಳ ಯೋಚನೆ ಮಾಡಿ ಮಾಡಿದೆವು.

ಶ್ರೀ ಎಸ್. ರಾಜೇಂದ್ರನ : ಮಾನ್ಯ ಅಧ್ಯಕ್ಷರೆ, ಕೂನೆಗೆ ಆ ಬಿ.ಎಡ್. ಕಾಲೇಜನ್ನು ಅಲ್ಲಿಂದ ಇಲ್ಲಿಗೆ ಶಿಫ್ಟ ಮಾಡಿದ್ದಾರೆ. ಬೇಕಾದಷ್ಟು ಷೆಡ್ಯೂಲ್ಡ ಕ್ಯಾಸ್ಟ, ಬ್ಯಾಕವರ್ಡ ಅಂಡ್ ಮೈನಾರಿಟೀಸ್ ಜನ ಕೆ.ಜಿ.ಎಫ್. ನಲ್ಲಿ ಇದ್ದಾರೆ. ಈ ಡಾ: ಅಂಬೇಡ್ಕರ್ ಮೆಡಿಕಲ್ ಕಾಲೇಜನ್ನು 10 ವರ್ಷಕ್ಕೆ ಕೆ.ಜಿ.ಎಫ್.ಗೆ ಶಿಫ್ಟ್ ಮಾಡಿಕೊಡಿ ಸ್ವಾಮಿ. ಈ ರೀತಿ ಕೊಡುವುದಕ್ಕೆ ಆಗುತ್ತದೆಯೇ? ಕೊಡುವುದಾದರೆ ಕೊಟ್ಟುಬಿಡಿ.

ಅಧ್ಯಕ್ಷರು : ಏನು ರಾಜೇಂದ್ರನ್ ಹೇಳಿದ್ದುದು?

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಅಧ್ಯಕ್ಷರೆ, ಈಗ ಕಾಲೇಜು ಶಿಫ್ಟ ಆಗಿದೆ. ಅದಕ್ಕೆ ಕಾನೂನಿನ ರೀತಿಯಲ್ಲಿ ನಡೆದುಕೊಂಡಿದ್ದಾರೆ, ವಿಶ್ವವಿದ್ಯಾನಿಲಯದವರು ಇನ್ಸಪೆಕ್ಷನ್ ಮಾಡಿದ್ದಾರೆ ಇತ್ಯಾದಿಗಳನ್ನು ಮಾನ್ಯ ಸಚಿವರು ಹೇಳುತ್ತಿದ್ದಾರೆ. ನನಗೆ ನೋವು ಏನಂದರೆ ಕೆ.ಜಿ.ಎಫ್.ನಲ್ಲಿ I am the representative of the people. Two days back Sri Ramesh Jigjinagi was talking about CRE Cell. CRE ಸೆಲ್ ಕೆ.ಜಿ.ಎಫ್.ಗೆ ಏತಕ್ಕೆ? ಅಲ್ಲಿ ಇರುವವರೆಲ್ಲ ಶೆಡ್ಯೂಲ್ಡ ಕ್ಯಾಸ್ಟನವರೇ, ಬ್ಯಾಕವರ್ಡ ಮೈನಾರಿಟಿಯವರು, ಅವರಿಗೆ ಕೊಡಬಾರದು, ನಿಮ್ಮವರೇ ಇರುತ್ತಾರೆಂದು ಹೇಳಿದರು. The entire Government knows that large number of Scheduled Caste and Scheduled Tribe, Backward class and Minorities live in one place i.e. K.G.F. ಅಲ್ಲಿಯ ಜನ ಏನು ಹೇಳುತ್ತಿದ್ದಾರೆಂದರೆ, ಏನು ಸರ್, ನೀವು ಎಂ.ಎಲ್.ಎ. ಆಗಿ ಬಂದ ತಕ್ಷಣ Mr. Kalegowda is the owner of that B.Ed. College ಈಗ ನಮ್ಮ ದೇವೇಗೌಡರು ಬಂದ ತಕ್ಷಣ ಕಾಳೇಗೌಡರಿಗೆ ಸಪೋರ್ಟ್ ಮಾಡಿಬಿಟ್ಟರು ಎಂದು ಹೇಳಿದರು ಇದರಿಂದ ನನಗೆ ನೋವು ಆಯಿತು. ನಮ್ಮ ದೇವೇಗೌಡ ಸಾಹೇಬರು ಆ ರೀತಿ ಮಾಡುವುದಿಲ್ಲ. ಈ ರೀತಿ ಮಾಡಿರುವವರು ವಿಶ್ವವಿದ್ಯಾನಿಲಯದವರು. ನಮ್ಮ ದೇವೇಗೌಡರು ಯಾವಾಗಲೂ ಬಡವರಿಗೆ, ರೈತರಿಗೆ, ಹರಿಜನ ಗಿರಿಜನರಿಗೆ ಸಹಾಯ ಮಾಡುತ್ತಾರೆ. ಈಗ ಮಾಡಿರುವ ತಪ್ಪಿಗೆ ನಾನು ಏನು

ಉತ್ತರ ಕೊಡುವುದು? ನನಗೆ ಹೊಸ ಬಿ.ಎಡ್. ಕಾಲೇಜನ್ನು ಕೊಡುತ್ತೀರಾ? ಇಲ್ಲವೇ ಈ ಬಿ.ಎಡ್. ಕಾಲೇಜನ್ನು ಕೆ.ಜಿ.ಎಫ್. ತಿಪ್ಪಮಾಡುತ್ತೀರೋ?

ಶ್ರೀ ಎಸ್. ರಾಜೇಂದ್ರನ್ : ನಮಗೆ ಒಂದು ಬಿ.ಎಡ್. ಕಾಲೇಜು ಕೊಟ್ಟುಬಿಟ್ಟರೆ ನಮ್ಮ ದೇವೇಗೌಡರ ಸಾಹೇಬರನ್ನು ನಮ್ಮ ಜನ ಎಲ್ಲಾ ದೇವರು ತರಹ ನೋಡುತ್ತಿದ್ದರು. ಹೊಸ ಕಾಲೇಜನ್ನು ಕೊಟ್ಟಿದ್ದಾರೆಂದು ನನ್ನ ಕ್ಷೇತ್ರದ ಜನರಿಗೆ ಹೇಳುತ್ತೇನೆ ಸ್ವಾಮಿ. ಬಿ.ಎಡ್. ಕಾಲೇಜನ್ನು ಕೊಡುತ್ತೇನೆಂದು ನನಗೆ ಉತ್ತರ ಕೊಟ್ಟುಬಿಡಿ. ಆ ಕಾಲೇಜನ್ನು ಕೊಟ್ಟರೆ ನಾನು ಜೂನ್ ತಿಂಗಳನಲ್ಲಿ ಪ್ರಾರಂಭ ಮಾಡಬೇಕು.

ಶ್ರೀ ಡಿ. ಮಂಜುನಾಥ್ : ಏಂಟನೆಯ ಪಂಚವಾರ್ಷಿಕ ಯೋಜನೆಯು ಮುಗಿಯುವರೆಗೂ ಯಾವುದೇ ಬಿ.ಎಡ್. ಕಾಲೇಜುಗಳನ್ನು ತೆರೆಯಲು ಅವಕಾಶವನ್ನು ಕೊಡಬಾರದೆಂದು ನಿಯಮವೇ ಇದೆ.

ಅಧ್ಯಕ್ಷರು : ಮಾನ್ಯ ಸದಸ್ಯರಾದ ಶ್ರೀ ರಾಜೇಂದ್ರನ್ ರವರು ಮಾಡಿದ ಒಂದು ಆರೋಪವನ್ನು ಪರೋಕ್ಷವಾಗಿ ತಾವು ಒಪ್ಪಿಕೊಂಡ ಹಾಗೆ ಆಯಿತು. ಅನಧಿಕೃತವಾಗಿ ಅವರು ವಿದ್ಯಾ ಸಂಸ್ಥೆಗಳನ್ನು ವರ್ಗಾವಣೆ ಮಾಡಿ ಬಿಡುತ್ತಾರೆ. ಆಮೇಲೆ ಸರ್ಕಾರದವರು ಅವನ್ನು ರ್ಯಾಟಿಫೈ ಮಾಡಿಬಿಡುತ್ತಾರೆ. ಅಂದರೆ ಪ್ರೈವೇಟಿನವರು ಅವರಿಗೆ ಬೇಕಾದಂತೆ ಬೇಕಾದ ಕಡೆಗಳಿಗೆ ವಿದ್ಯಾ ಸಂಸ್ಥೆಗಳನ್ನು ವರ್ಗಾವಣೆ ಮಾಡಿಕೊಂಡು ಹೋದರೆ ಸರ್ಕಾರ ಅವರು ಹೇಳಿದಂತೆ ನಡೆದುಕೊಳ್ಳುವುದು ಸರಿಯಲ್ಲ. He is rightly pointed out Government should not do such things.

ಶ್ರೀ ಡಿ. ಮಂಜುನಾಥ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀ ರಾಜೇಂದ್ರನ್ ರವರು ಹಿಂದುಳಿದ ಕ್ರಿಶ್ಚಿಯನವರಿಗೆ ಅನ್ಯಾಯವಾಗುತ್ತಿದೆ ಎಂದು ಹೇಳಿದ್ದಾರೆ. ಇದರ ಬಗ್ಗೆ ನಮ್ಮ ಸರ್ಕಾರ ಕಳೆದ ವರ್ಷ ಒಂದು ತೀರ್ಮಾನವನ್ನು ಮಾಡಿದ್ದೇವೆ. ಮುಂಚೆ ಈ ರೀತಿಯಾಗಿ ಹಿಂದುಳಿದ ಕ್ರಿಶ್ಚಿಯನವರಿಗೆ ಅನ್ಯಾಯವಾಗುತ್ತಿತ್ತು. ನಮ್ಮ ಕರ್ನಾಟಕ ರಾಜ್ಯದ ಬಿ.ಎಡ್. ಕಾಲೇಜಿಗೆ ಹೊರ ರಾಜ್ಯದವರಾದ ತಮಿಳುನಾಡಿನವರು, ಕೇರಳ ರಾಜ್ಯದ ವಿದ್ಯಾರ್ಥಿಗಳು ಬಂದು ಸೇರುತ್ತಿದ್ದರು. ಕಳೆದ ವರ್ಷ ನಾವು ಏನು ತೀರ್ಮಾನವನ್ನು ಮಾಡಿದ್ದೇವೆ ಎಂದರೆ ಖಾಸಗಿಯ ಸಂಸ್ಥೆಯಾದರೆ ಇದು ಅವರಿಗೆ ಅನ್ವಯಿಸುವುದಿಲ್ಲ. ಆದರೆ ಸರ್ಕಾರಿ ಬಿ.ಎಡ್. ಕಾಲೇಜು ಆದರೆ ಆ ಕಾಲೇಜು ರೋಸ್ಟರನ್ನು ಅನ್ವಯಿಸಿ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲಾಗುತ್ತಿದೆ. ಆದರೆ ಕಳೆದ ವರ್ಷ ನಾವು ಏನು ತೀರ್ಮಾನವನ್ನು ಮಾಡಿದ್ದೇವೆ ಆ ಪ್ರಕಾರವೇ ಹಿಂದುಳಿದ ಕ್ರಿಶ್ಚಿಯನ್ ಕಮ್ಯೂನಿಟಿಯವರಿಗೂ ರೋಸ್ಟರ್ ಪ್ರಕಾರವಾಗಿ ಅಲ್ಲಿ ಕಾಲೇಜಿಗೆ ಸೇರಲು ಅವಿಧಿಸ್ ಸಿಗುತ್ತದೆ. ಅವರುಗಳಿಗೆ ಈಗ ಏನೂ ಅನ್ಯಾಯವಾಗುವುದಿಲ್ಲ. ಮಾನ್ಯ ರಾಜೇಂದ್ರನ್‌ರವರು ಕೋಲಾರಕ್ಕೆ ಒಂದು ಬಿ.ಎಡ್. ಕಾಲೇಜನ್ನು ಕೊಡುತ್ತೀರ ಎಂದು ಕೇಳಿದ್ದಾರೆ, ಏಂಟನೇ ಪಂಚವಾರ್ಷಿಕ ಯೋಜನೆಯು 1997ಕ್ಕೆ ಮುಗಿಯುತ್ತದೆ 1997ರಲ್ಲಿ ಬಿ.ಎಡ್. ಕಾಲೇಜನ್ನು ತೆರೆಯಲು ಅರ್ಜಿಯನ್ನು ಕೊಟ್ಟರೆ ಪರಿಶೀಲನೆಯನ್ನು ಮಾಡುತ್ತೇವೆ.

ಶ್ರೀ ಜಿ. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕ ಮಿತ್ರರಾದ ಶ್ರೀ ಕೆ.ಎಸ್. ಪುಟ್ಟಣ್ಣಯ್ಯನವರು ಕೇಳಿದ ಪ್ರಶ್ನೆಗೆ ಉತ್ತರವನ್ನು ಕೊಟ್ಟಿರುವುದರಲ್ಲಿ ಸ್ವಲ್ಪ ಬದಲಾವಣೆಯನ್ನು ಮಾಡಬೇಕಾಗಿದೆ. ಪಾಂಡವಪುರ ಕ್ಷೇತ್ರದಲ್ಲಿರತಕ್ಕಂತಹ ಒಟ್ಟು ಪ್ರಾಥಮಿಕಶಾಲೆಯ ಶಿಕ್ಷಕರ ಮತ್ತು ಮಕ್ಕಳ ಸಂಖ್ಯೆ ಎಷ್ಟು ಎಂದು ಮಾನ್ಯ ಸದಸ್ಯರು ಪ್ರಶ್ನೆಯನ್ನೇ ಕೇಳಿದ್ದಾರೆ. ಉತ್ತರವನ್ನು ಮಾನ್ಯ ಸದಸ್ಯರಿಗೆ ಕಳುಹಿಸಿದ್ದರಲ್ಲಿ ಸ್ವಲ್ಪ ವ್ಯತ್ಯಾಸವಾಗಿದೆ ಸರಿಯಾದುದು ಈ ರೀತಿಯಾಗಿದೆ. " ಪಾಂಡುಪುರ ಕ್ಷೇತ್ರದಲ್ಲಿ ಒಟ್ಟು 205 ಪ್ರಾಥಮಿಕ ಪಾಠಶಾಲೆಗಳು ಇದ್ದು ಒಟ್ಟು 756 ಶಿಕ್ಷಕರು ಕರ್ತವ್ಯವನ್ನು ನಿರ್ವಹಿಸುತ್ತಿದ್ದು ಈ ಶಾಲೆಗಳಲ್ಲಿ ಒಟ್ಟು, 27.832 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ"

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಪಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, 11ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 25 ಪ್ರಶ್ನೆಗಳ ಪೈಕಿ 19 ಪ್ರಶ್ನೆಗಳಿಗೆ ಉತ್ತರವನ್ನು ಸದನ ಮುಂದೆ ಮಂಡಿಸುತ್ತೇನೆ.

ವೈದ್ಯಕೀಯ ಶಿಕ್ಷಣಕ್ಕೆ ಪ್ರವೇಶ ಕೋರಿಕೆ

736 - ಶ್ರೀ ಅಮರೇಗೌಡ ಪಾಟೀಲ್ (ಲಿಂಗಸೂರು) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1990-91 ರಿಂದ 1995ರವರೆಗೆ ವೈದ್ಯಕೀಯ ಶಿಕ್ಷಣಾರ್ಥಿಗಳಿಗೆ ಪ್ರವೇಶ ಕೋರ್ಸಗಳಿಗೆ ನೀಡಿದ ಒಟ್ಟು ಪ್ರವೇಶ ಎಷ್ಟು?*

ಆ) *ವಿಭಾಗವಾರು ವಿದ್ಯಾರ್ಥಿಗಳು ಎಷ್ಟು ಪ್ರವೇಶ ಕಲ್ಪಿಸಲಾಗಿದೆ.*

ಇ) *ಹಿಂದುಳಿದ ಪ್ರದೇಶವಾದ ಗುಲ್ಬರ್ಗಾ ಬೆಳಗಾಂ ವಿಭಾಗದ ವಿದ್ಯಾರ್ಥಿಗಳಿಗೆ ವಿಶೇಷ ಆದ್ಯತೆಯಲ್ಲಿ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸುವ ಉದ್ದೇಶ ಸರ್ಕಾರಕ್ಕೆ ಇದಯೇ?*

ಈ) *ಹಾಕಿದ್ದಲ್ಲಿ, ಈ ಬಗ್ಗೆ ಸರ್ಕಾರ ಇಲ್ಲಿಯವರೆಗೂ ಕೈಗೊಂಡ ಕ್ರಮವೇನು?*

ಶ್ರೀ ವಿ.ಜಿ. ಪಾಟೀಲ್ (ವೈದ್ಯಕೀಯ ಶಿಕ್ಷಣ ನಿರ್ದೇಶಕರು) :

ಅ)

1991-92	3105
1992-93	3345
1993-94	3335